# ವ್ಯಕ್ತಿ ಚಾರಿತ್ರ್ಯ

ಇಂಗ್ಲಿಷಿನಲ್ಲಿ ಒಂದು ಗಾದೆ ಮಾತು ಹೀಗಿದೆ. ಸಂಪತ್ತು ಹೋದಾಗ ಕಳೆದುಕೊಳ್ಳುವುದು ಅಲ್ಪ, ಆರೋಗ್ಯ ಹೋದಾಗ ಕಳೆದುಕೊಳ್ಳುವುದು ಸ್ವಲ್ಪ, ಚಾರಿತ್ರ್ಯ ಹೋದಾಗ ಕಳೆದುಕೊಳ್ಳುವುದು ಸರ್ವಸ್ವ. ಇಷ್ಟಕ್ಕೂ ಚಾರಿತ್ರ್ಯವೆಂದರೇನು? ಅದು ವ್ಯಕ್ತಿಗೆ ಯಾಕೆ ಮುಖ್ಯವಾಗುತ್ತದೆ ಎಂಬುದರ ಕಡೆಗೆ ಸ್ವಲ್ಪ ಗಮನ ಹರಿಸೋಣ. ಚಾರಿತ್ರ್ಯವೆಂದರೆ ಒಳ್ಳೆಯ ನಡವಳಿಕೆ ಎಂದು ನಿಘಂಟಿನ ಅರ್ಥವಿದೆ. ಮನುಷ್ಯ ಸಂಘಜೀವಿ ಆದ್ದರಿಂದ ನಡವಳಿಕೆಯ ಅಗತ್ಯವಿದೆ. ಇತರರ ನಡುವೆ ನಾವು ಹೇಗಿರಬೇಕೆಂಬ ಒಂದು ನಿಯಮಾವಳಿ ಇದೆ. ಅದೇ ನಡವಳಿಕೆ. ನಮ್ಮ ನಡವಳಿಕೆ ಇತರರಿಗೆ ಸಹ್ಯವಾಗಿರಬೇಕು, ಅವರ ಸದ್ಭಾವನೆಗಳಿಗೆ ಅಡಚಣೆ ಉಂಟುಮಾಡಬಾರದು. ಚಾರಿತ್ರ್ಯ ಇನ್ನೊಬ್ಬರಿಗೆ ಮುದ ನೀಡುವಂತಿದ್ದರೆ, ಗೌರವ ಭಾವನೆ ಮೂಡುವಂತಿದ್ದರೆ ಅದು ಉತ್ತಮ ಚಾರಿತ್ರ್ಯ.

ಉತ್ತಮ ಚಾರಿತ್ರ್ಯ ಹೊಂದುವುದು ಕೇವಲ ಇನ್ನೊಬ್ಬರಿಗಾಗಿ ಅಷ್ಟೇ ಅಲ್ಲ. ಅದು ಹೆಚ್ಚು ಲಾಭದಾಯಕವಾಗುವುದು ಸ್ವಂತಕ್ಕೇ. ಯಾಕೆಂದರೆ ಕೆಟ್ಟ ನಡವಳಿಕೆಯಿಂದ ನಾವು ಕೆಡುಕುಗಳನ್ನೇ ಆಹ್ವಾನಿಸುತ್ತೇವೆ. ಕೆಟ್ಟ ಸಹವಾಸವನ್ನು ಪಡೆಯುತ್ತೇವೆ. ಕೆಟ್ಟ ಕರ್ಮಗಳಲ್ಲಿ ತೊಡಗುತ್ತೇವೆ. ಇವುಗಳಿಂದ ಮಾನಸಿಕ ನೆಮ್ಮದಿ ನಷ್ಟವಾಗುತ್ತದೆ. ಗಳಿಸಿದ ಸಂಪತ್ತು ನಷ್ಟವಾಗುತ್ತದೆ. ತನ್ಮೂಲಕ ವ್ಯಕ್ತಿಯ ಆರೋಗ್ಯವೂ ಖಿಲವಾಗುತ್ತದೆ. ಆದ್ದರಿಂದ ವ್ಯಕ್ತಿಗೆ ಚಾರಿತ್ರ್ಯವೇ ಬುನಾದಿ. ಚಾರಿತ್ರ್ಯ ಸದೃಢವಾಗಿದ್ದಷ್ಟು ಆರೋಗ್ಯ ಉತ್ತಮವಾಗಿರುತ್ತದೆ. ಚಾರಿತ್ರ್ಯ ಆರೋಗ್ಯ ಎರಡೂ ಇದ್ದಾಗ ಸಂಪತ್ತಿನ ಸೃಷ್ಟಿ ಅಸಾಧ್ಯವೇನಲ್ಲ. ಈ ದೃಷ್ಟಿಯಲ್ಲಿ ಮೇಲಿನ ಗಾದೆ ಮಾತು ಎಷ್ಟು ಅರ್ಥಗರ್ಭಿತವಾಗಿದೆ!

ಶುದ್ಧ ಚಾರಿತ್ರ್ಯ ಕೊಳ್ಳುವ ವಸ್ತುವಲ್ಲ. ಹಾಗಿದ್ದರೆ ಅಜಾತಶತ್ರುವೆಂಬ ರಾಜ ತನ್ನ ತಂದೆಯನ್ನು ಬಗೆಬಗೆಯಾಗಿ ಹಿಂಸಿಸಿ ಕೊಲ್ಲುತ್ತಿರಲಿಲ್ಲ. ವಂಶವಾಹಿನಿಯಾಗಿಯೂ ಬರುವಂಥದ್ದಲ್ಲ. ಹಾಗಿದ್ದರೆ ಹಿರಣ್ಯಕಶಿಪು ಮತ್ತು ಪ್ರಹ್ಲಾದರ ಕಥೆ ಹುಟ್ಟಲು ಸಾಧ್ಯವೇ ಇರುತ್ತಿರಲಿಲ್ಲ. ಹಾಗಾದರೆ ಅದನ್ನು ಗಳಿಸಿಕೊಳ್ಳುವ ಬಗೆ ಹೇಗೆ? ಚಾರಿತ್ರ್ಯವೆನ್ನುವುದು ಒಂದು ವ್ರತದ ಹಾಗೆ. ಅದನ್ನು ರೂಢಿಸಿಕೊಳ್ಳಬೇಕು ಮತ್ತು ಕಾಪಿಟ್ಟುಕೊಳ್ಳಬೇಕು. ತಮ್ಮ ಜೀವನದಲ್ಲಿ ಶಾಂತಿ, ನೆಮ್ಮದಿ, ಪ್ರೇಮಗಳು ಇರಬೇಕೆಂದು ಬಯಸುವವರು ಅದನ್ನು ಮೈಗೂಡಿಸಿಕೊಳ್ಳಲು ಸದಾ ಪ್ರಯತ್ನಶೀಲರಾಗಿರುತ್ತಾರೆ ಮತ್ತು ಕಾಪಾಡಿಕೊಳ್ಳಲು ಸದಾ ಎಚ್ಚರವಾಗಿರುತ್ತಾರೆ.

ಮನುಷ್ಯನ ಮನಸ್ಸು ಮೂಲಭೂತವಾಗಿ ನಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತದೆ. ಎಷ್ಟೋ ಬಾರಿ ಅವನ ಬಹಿರ್ಮುಖ ವ್ಯಕ್ತಿತ್ವ ಅಂತರಂಗವೂ ಆಗಿರುವುದಿಲ್ಲ. ಸಚ್ಚಾರಿತ್ರ್ಯಕ್ಕೆ ಮೂರು ಮಹಾ ಮಾರ್ಗಗಳಿವೆ. ಶರೀರ ಶುದ್ಧಿ, ವಿಚಾರ ಶುದ್ಧಿ ಮತ್ತು ಭಾವಶುದ್ಧಿ ಎಂಬ ಮಾರ್ಗಗಳು. ಬಸವಣ್ಣ 'ದೇಹವೇ ದೇಗುಲ' ಎಂದದ್ದೂ ಸಹ ಶರೀರ ಶುದ್ಧಿಯನ್ನೇ ಹೇಳುತ್ತದೆ. ದೇಹವನ್ನು ದೇಗುಲವೆಂದು ತಿಳಿದಾಗ ಅಲ್ಲಿ ಮೈಲಿಗೆಗೆ ಅವಕಾಶವೇ ಇರುವುದಿಲ್ಲ. ಶರೀರವು ಶತ್ರುವೂ ಅಲ್ಲ, ಮಿತ್ರನೂ ಅಲ್ಲ. ಅದೊಂದು ಉಪಕರಣವಷ್ಟೆ. ಅದನ್ನು ಉಪಯೋಗಿಸಿಕೊಂಡು ನೀವು ಪಾಪವನ್ನಾದರೂ ಮಾಡಬಹುದು. ಪುಣ್ಯವನ್ನಾದರೂ ಮಾಡಬಹುದು. ಅದೊಂದು ಅದ್ಭುತ ಯಂತ್ರವಿದ್ದ ಹಾಗೆ ಎಂಬ ಓಶೋ ವಾಣಿ ಇಲ್ಲಿ ಗಮನಾರ್ಹ. ಶರೀರ ಸ್ವಾಸ್ಥ್ಯಕ್ಕೆ ಸಂಯಕ್ ಆಹಾರ, ಸಂಯಕ್ ವ್ಯಾಯಾಮ, ಸಂಯಕ್ ವಿಶ್ರಾಂತಿ ಮುಖ್ಯ. ಬಹಳಷ್ಟು ಜನರ ಚಿಂತನೆಯನ್ನು ಕೇವಲ ಮೂರು ವಿಷಯಗಳು ಆಕ್ರಮಿಸಿಕೊಂಡಿರುತ್ತವೆ. ಅವು ಯಶಸ್ಸು, ಹಣ ಮತ್ತು ಕಾಮ. ಚಾರಿತ್ರ್ಯವನ್ನು ರೂಪಿಸುವುದು ಚಿಂತನೆಯೇ. ಆದ್ದರಿಂದ ಶುದ್ಧ ವಿಚಾರದ ಚಿಂತನೆ ಅಗತ್ಯ.

ಒಮ್ಮೆ ಚೀನಾದ ಒಬ್ಬ ರಾಜ ಸಮುದ್ರ ದಡದಲ್ಲಿ ನಿಂತು ಬರುವ ಹೋಗುವ ಹಡಗುಗಳನ್ನು ನೋಡುತ್ತಾ ತನ್ನ ಮಂತ್ರಿಗೆ ಎಷ್ಟೊಂದು ಹಡಗುಗಳು ಇಲ್ಲಿ ಸಂಚರಿಸುತ್ತವೆ ಎಂದನಂತೆ. ಅದಕ್ಕೆ ಮಂತ್ರಿ; 'ಇಲ್ಲ ರಾಜನ್ ಇಲ್ಲಿ ಕೇವಲ ಮೂರು ಹಡಗುಗಳು ಮಾತ್ರ ಸಂಚರಿಸುತ್ತಿವೆ. ಅವು ಯಶಸ್ಸು, ಹಣ ಮತ್ತು ಕಾಮದ ಹಡಗುಗಳು' ಎಂದನಂತೆ. ನಮ್ಮ ವಿಚಾರಗಳ ಯಾತ್ರೆ ಈ ಮೂರು ಹಡಗುಗಳ ಮೇಲೆಯೇ ನಡೆಯುವುದು. ಯಾರು ಆ ಮೂರು ಹಡಗುಗಳನ್ನು ಇಳಿಯುತ್ತಾರೋ ಅವರಿಗೆ ಶುದ್ಧ ವಿಚಾರಗಳಲ್ಲಿ ಪ್ರವೇಶ ಮಾಡಲು ಸಾಧ್ಯ. ಭಾವಶುದ್ಧಿಗೆ ಬುದ್ಧನ ತತ್ವಗಳೇ ಔಷಧಿ. ಪ್ರಜ್ಞೆ, ಶೀಲ ಮತ್ತು ಸಮಾಧಿ. ಇವು ಪ್ರತಿನಿಧಿಸುವ ಅಷ್ಟಾಂಗ ಮಾರ್ಗಗಳನ್ನು ಅನುಸರಿಸಿದರೆ ಭಾವಶುದ್ಧಿಯ ಸಾಧನೆ ನಿರ್ವಿಘ್ನ. ಇನ್ನೊಬ್ಬರಲ್ಲಿ ಮೈತ್ರಿ ಭಾವನೆ ಹೊಂದುವುದು ಎಂದರೆ ನನ್ನಂತೆಯೆ ಪರರಿಗೂ ಒಳಿತಾಗಲಿ ಎಂದು ಭಾವಿಸುವುದು.

ಸಚ್ಚಾರಿತ್ರ್ಯಕ್ಕೆ ಶುದ್ಧ ಶರೀರವೇ ಪಾತ್ರೆ, ಶುದ್ಧ ವಿಚಾರವೇ ರಸಾಯನ, ಭಾವಶುದ್ಧಿಯೇ ರುಚಿ.

■ ಮೂಚಿ

## ಮಾತೇ ಮುತ್ತು

★ ಅಪರಾಧವನ್ನು ದ್ವೇಷಿಸು; ಅಪರಾಧಿಯನ್ನು ಪ್ರೀತಿಸು.

-ಮಹಾತ್ಮ ಗಾಂಧೀಜಿ

★ ಹಸಿವೆ ಮತ್ತು ಬಡತನದ ಸಮಸ್ಯೆಯನ್ನು ವಿಜ್ಞಾನ ಮಾತ್ರ ಪರಿಹರಿಸಬಲ್ಲುದು. ಭವಿಷ್ಯ ವಿಜ್ಞಾನಕ್ಕೆ ಹಾಗೂ ವಿಜ್ಞಾನದ ಜತೆ ಗೆಳೆತನ ಹೊಂದಿದವರಿಗೆ ಸೇರಿದ್ದು.

-ಜವಾಹರಲಾಲ್ ನೆಹರೂ

★ ಮನಸ್ಸಿನ ಉಳುಮೆಯೇ ಮಾನವ ಅಸ್ತಿತ್ವದ ಅಂತಿಮ ಉದ್ದೇಶ.

-ಬಾಬಾಸಾಹೇಬ್ ಅಂಬೇಡ್ಕರ್

★ ಪ್ರೀತಿಯಿಂದ ಸ್ಫೂರ್ತಿ ಪಡೆದ ಮತ್ತು ಜ್ಞಾನದಿಂದ ಮಾರ್ಗದರ್ಶನ ಪಡೆದ ಜೀವನವೇ ಅತ್ಯುತ್ತಮವಾದದ್ದು.

-ಬರ್ಟ್ರೆಂಡ್ ರಸೆಲ್

★ ಇನ್ನೊಬ್ಬರ ಮೋಡದಲ್ಲಿ ಕಾಮನಬಿಲ್ಲು ಆಗಲು ಪ್ರಯತ್ನಿಸಿ.

-ಮಾಯಾ ಆಂಗೆಲೊ

★ ಜೀವನವನ್ನು ಹತ್ತಿರದಿಂದ ನೋಡಿದರೆ ದುರಂತ; ಲಾಂಗ್‌ಶಾಟ್‌ನಲ್ಲಿ ನೋಡಿದರೆ ತಮಾಷೆ.

-ಚಾರ್ಲಿ ಚಾಪ್ಲಿನ್

ಶಿಕ್ಷಣವೇ ಅತ್ಯುತ್ತಮ ಗೆಳೆಯ. ಅದು ಸೌಂದರ್ಯ ಮತ್ತು ಯೌವನವನ್ನೂ ಹಿಮ್ಮೆಟ್ಟಿಸುತ್ತದೆ.

-ಚಾಣಕ್ಯ

★ ಜಗತ್ತಿನಲ್ಲಿ ಅತ್ಯಂತ ಸುಂದರ ವಸ್ತುಗಳನ್ನು ನೋಡಲೂ ಆಗದು, ಸ್ಪರ್ಶಿಸಲೂ ಆಗದು. ಅವುಗಳನ್ನು ಹೃದಯದಿಂದ ಸಂವೇದಿಸುವುದು ಮಾತ್ರ ಸಾಧ್ಯ.

-ಹೆಲೆನ್ ಕೆಲ್ಲರ್

★ ಪರಿಪೂರ್ಣತೆಯನ್ನು ಸಾಧಿಸಲು ಆಗುವುದಿಲ್ಲ. ಆದರೆ ಪರಿಪೂರ್ಣತೆಯನ್ನು ಬೆನ್ನಟ್ಟಿದರೆ ಅತ್ಯುತ್ತಮವಾದುದನ್ನು ಸಾಧಿಸಬಹುದು.

-ವಿನ್ಸ್ ಲೊಂಬಾರ್ಡಿ

★ ಒಳ್ಳೆಯ ಸ್ನೇಹಿತರು, ಒಳ್ಳೆಯ ಪುಸ್ತಕಗಳು ಮತ್ತು ನಿದ್ರಿಸುತ್ತಿರುವ ಆತ್ಮಸಾಕ್ಷಿ. ಇದಕ್ಕಿಂತ ಆದರ್ಶ ಜೀವನವಿಲ್ಲ.

-ಮಾರ್ಕ್‌ಟ್ವೈನ್

★ ಯಾರು ಸಂತೋಷದಿಂದ ಇರುತ್ತಾರೋ ಅವರು ಬೇರೆಯವರನ್ನೂ ಸಂತೋಷಗೊಳಿಸಬಲ್ಲರು.

-ಆನಿ ಫ್ರಾಂಕ್

★ ಸಂತೋಷವನ್ನು ಇನ್ನೊಬ್ಬರ ಜತೆ ಹಂಚಿಕೊಳ್ಳುವುದರಿಂದ ಅದು ಯಾವತ್ತೂ ಕಡಿಮೆ ಆಗುವುದಿಲ್ಲ.

-ಗೌತಮ ಬುದ್ಧ

★ ಬದಲಾವಣೆ ಎನ್ನುವುದು ಬದುಕಿನ ನಿಯಮ. ನಿನ್ನೆ ಮತ್ತು ಇವತ್ತಿನ ಬಗ್ಗೆ ಮಾತ್ರ ಯೋಚಿಸುತ್ತಿದ್ದರೆ ಭವಿಷ್ಯವನ್ನು ಕಳೆದುಕೊಳ್ಳುತ್ತೇವೆ.

-ಜಾನ್ ಎಫ್. ಕೆನೆಡಿ